## ದೇಹದ ಬಣ್ಣ ಸೌಂದರ್ಯ ಅಲ್ಲ

ಉದಯದಲ್ಲಿ 'ಆನಂದರಾಗ' ಇತ್ತೀಚೆಗೆ ಪ್ರಸಾರ ಆಗುತ್ತಿದೆ. ಅದರಲ್ಲಿ ಮೈಬಣ್ಣ ಮತ್ತು ಸೌಂದರ್ಯದ ಪರಿಕಲ್ಪನೆಯನ್ನು ಒರೆಗೆ ಹಚ್ಚುವ ಪ್ರಯತ್ನವನ್ನು ಮಾಡಿದ್ದಾರೆ ಎಂದೆನ್ನಿಸಿತ್ತು. ಅದು ಹುಸಿಯಾಗಿದೆ, ಕಥೆಯ ನಾಯಕನ ಬಣ್ಣವೇ ಆಡಿಕೊಳ್ಳುವ ಮಾತಾಗುತ್ತದೆ. ನಿರಂತರ ಅವಮಾನ ತಾಳಲಾಗದೆ ಕೊನೆಗೆ ಅವನು ಮಾನಸಿಕ ಕ್ಷೋಭೆಗೂ ಒಳಗಾಗುತ್ತಾನೆ. ಹೀಗಿರುವ ಅವನನ್ನು ಬೇಗ ಗುಣಪಡಿಸಬೇಕು. ಮಾತ್ರವಲ್ಲ ಸೌಂದರ್ಯ ಬಣ್ಣದಲ್ಲಿಲ್ಲ ಎಂಬ ಸವಾಲನ್ನು ಬಿಡಿಸಬೇಕಿದೆ. ಹೀಗಿರುವಾಗಲೇ ಆ ಕಪ್ಪು ಹುಡುಗನ ಸಿರಿವಂತಿಕೆ ಬಣ್ಣವನ್ನು ಮೀರುತ್ತದೆ. ಆರ್ಥಿಕ ಸಂಪತ್ತು ಪ್ರೀತಿಯ ಆಕರ್ಷಣೆಯೂ ಹೌದು ಎನ್ನುವ ವಾಸ್ತವ ಅಂಶವನ್ನು ಗುರುತಿಸಿರುವುದು ಮೆಚ್ಚುವ ಸಂಗತಿ.

ಕಥೆಯ ವಿಷಯ ಏನೇ ಆಗಲಿ, ಇತ್ತೀಚೆಗೆ ಕೆಲವು ಟೀವಿಗಳಲ್ಲಿ ಮೈ ಬಣ್ಣವೇ ಧಾರಾವಾಹಿಯ ಕಥೆಯ ಹೂರಣ ಆಗುತ್ತಿರುವುದು ಒಳ್ಳೆಯ ಬೆಳವಣಿಗೆ ಅಲ್ಲ. ಹಾಸ್ಯಕ್ಕಾಗಿ ದೇಹ ವಿಮರ್ಶೆ ಮಾಡುವುದು ಅಸೂಕ್ಷ್ಮ. ಆದ್ದರಿಂದ ಸೌಂದರ್ಯ ಮೀಮಾಂಸೆಯನ್ನು ದೇಹದ ಬಣ್ಣ ಮತ್ತು ಆಕೃತಿಯ ಚೌಕಟ್ಟಿಗೆ ಅಳವಡಿಸಬಾರದು ಎಂದು ಅನ್ನಿಸುತ್ತದೆ.

—ಪದ್ಮಾ ಶ್ರೀರಾಮಚಂದ್ರ, ಬೆಂಗಳೂರು

## ಸಾಮಾನ್ಯನೇ ಅಸಾಮಾನ್ಯ

ಝೀ ಕನ್ನಡದ 'ವೀಕೆಂಡ್ ವಿಥ್ ರಮೇಶ್' ಶೋನಲ್ಲಿ ಹೃದಯ ತಜ್ಞ ಡಾ. ಮಂಜುನಾಥ್ ಅವರನ್ನು ಪರಿಚಯಿಸಿದ್ದು ಒಳ್ಳೆಯದಾಯಿತು. ಸರ್ಕಾರಿ ಶಾಲೆಯಲ್ಲಿ ಓದಿದ ಒಬ್ಬ ವ್ಯಕ್ತಿ ನಾಡಿನ ಕೀರ್ತಿಯಾಗಿ ಬೆಳೆದಿರುವುದು ಸಣ್ಣ ಸಂಗತಿಯಲ್ಲ. ತಮ್ಮ ಸಾಮಾಜಿಕ ಕಾಳಜಿ ಹಾಗೂ ವೈದ್ಯ ವೃತ್ತಿಯ ಬದ್ಧತೆಯಿಂದ ಒಂದು ಸಂಸ್ಥೆಯ ಶ್ರೇಯಸ್ಸಿಗೂ ಕಾರಣರಾಗುತ್ತಾರೆ. ತಾವು ಕೆಲಸ ಮಾಡಿದ ಜಯದೇವ ಆಸ್ಪತ್ರೆಯಲ್ಲಿ ಸಾಕಷ್ಟು ಬಡ ಹೃದ್ರೋಗಿಗಳಿಗೆ ಚಿಕಿತ್ಸೆಯನ್ನು ಉಚಿತವಾಗಿ ನೀಡಿದ್ದು ಸಂಸ್ಥೆಯ ಗೌರವವನ್ನು ಹೆಚ್ಚಿಸಿರುವುದಕ್ಕೆ ಸಾಕ್ಷಿಯಾಗಿದೆ. ಸಿನಿಮಾ ಮಂದಿಗಿಂತ ಸಮಾಜಮುಖಿಯಾಗಿ ಕೆಲಸ ಮಾಡಿದ ಸಾಮಾನ್ಯರಿಗೆ ಈ ಕಾರ್ಯಕ್ರಮ ವೇದಿಕೆಯಾಗಲಿ. ಸಾಮಾನ್ಯನೂ ಅಸಾಮಾನ್ಯ ಅವನೇ ನೈಜ ಸೆಲೆಬ್ರಿಟಿ ಎನ್ನುವುದನ್ನು ತೋರಿಸುವುದು ಒಂದು ಜವಾಬ್ದಾರಿ ಎಂದು ಅನಿಸುತ್ತದೆ.

—ಶಿವಪ್ರಸಾದ್, ಶಿವಮೊಗ್ಗ

ವಾರದ ಪತ್ರ

## ಟೀವಿಗೆ ಬಂದ ಭಗವಂತ




ಮಧ್ಯಮ ವರ್ಗದವರ ಪಡಿಪಾಟಲುಗಳಿಗೆ ಸ್ವತಃ ಆ ಭಗವಂತನೇ ಪ್ರತ್ಯಕ್ಷನಾಗಿ ಪರಿಹಾರ ನೀಡುತ್ತಾನೆ. 'ಭೂಮಿಗೆ ಬಂದ ಭಗವಂತ' ಹೊಸ ಧಾರಾವಾಹಿ ಝೀ ಕನ್ನಡದಲ್ಲಿ ಗಮನಸೆಳೆಯುತ್ತಿದೆ. ಹಿರಿಯ ನಟ ಶ್ರೀನಿವಾಸಮೂರ್ತಿ ಅವರ ಪುತ್ರ ನವೀನ್ ಕೃಷ್ಣ ಅವರ ಅಭಿನಯ ಸುಂದರವಾಗಿದೆ.

'ದೇವರು ಎಂದಿಗೂ ಯಾರಿಗೂ ಹರಕೆ ಕಟ್ಟಿಕೊಳ್ಳುವಂತೆ ಹೇಳುವುದಿಲ್ಲ. ಬೇರೆಯವರು ನಮ್ಮ ಪರವಾಗಿ ಕಟ್ಟಿಕೊಂಡ ಹರಕೆಗೆ ನಾವು ಹೊಣೆಯಾಗುವುದು ನಮ್ಮ ವಿವೇಚನೆಗೆ ಬಿಟ್ಟ ವಿಚಾರ. ಪರಿಶ್ರಮವಿಲ್ಲದೆ ಬಂದ ಹಣ ಹೆಚ್ಚುಕಾಲ ನಿಲ್ಲುವುದಿಲ್ಲ. ನಿಂತರೂ ನೆಮ್ಮದಿ ಇರುವುದಿಲ್ಲ. ನಮ್ಮ ಪ್ರಾಮಾಣಿಕ ಪ್ರಯತ್ನಗಳಿಗೆ ಭಗವಂತನು ಯಾವಾಗಲೂ ಕೈಜೋಡಿಸುತ್ತಾನೆ' ಎಂಬ ನೈತಿಕ ಹಂದರದಲ್ಲಿ ಕಥೆಯನ್ನು ನಿರೂಪಿಸುತ್ತಿದ್ದಾರೆ. ಸಕಾರಾತ್ಮಕ ನಿಲುವುಗಳೊಂದಿಗೆ ಹಾಸ್ಯಮಯವಾಗಿ ಸಾಗುವ ಕಥೆ ಇಷ್ಟವಾಗುವಂತಿದೆ.

ರಾಜಾ ಕಂಪನಿಯ ಮಾಲೀಕನ ಪಾತ್ರಧಾರಿ ಬೆಂಗಳೂರು ನಾಗೇಶ್ ಅವರನ್ನು ಒಳವಸ್ತ್ರಗಳ ರೂಪದರ್ಶಿಯಾಗಿ ತೋರಿಸುವ ಬುದ್ಧಿಯನ್ನು ಆ ಭಗವಂತ ಯಾಕಾದರೂ ಕೊಟ್ಟನೋ? ಈ ಪ್ರಸಂಗ ಹಾಸ್ಯ ಹಾದಿ ತಪ್ಪಿದ್ದಕ್ಕೆ ಒಳ್ಳೆಯ ಉದಾಹರಣೆಯಂತಿತ್ತು. ಶಿವಪ್ರಸಾದನಿಗೆ 'ಲಾಟರಿ ಹೊಡೆಸುವ' ದೃಶ್ಯವಂತೂ ಇಂದಿನ ರಾಜಕಾರಣಿಗಳ ಅಭಿಮಾನಿಗಳ ಮೆರವಣಿಗೆಯನ್ನೂ ನಾಚಿಸುವಷ್ಟು ಸಹಜವಾಗಿತ್ತು.

—ವಾ. ಮುರಳೀಧರ, ತೀರ್ಥಹಳ್ಳಿ

## ಮನಸೂರೆಗೊಂಡ ಗಾಯನ ಮಾಣಿಕ್ಯ

ಚಂದನವಾಹಿನಿಯಲ್ಲಿ ಪ್ರಸಾರವಾಗುವ 'ಮರೆಯದ ಮಾಣಿಕ್ಯ' ಕಾರ್ಯಕ್ರಮವನ್ನು ಗುರುರಾಜ್ ಅವರು ಚೆನ್ನಾಗಿ ನಡೆಸಿಕೊಡುತ್ತಾರೆ. ಈಚೆಗೆ ಗಾಯಕರಾದ ಸಂಧ್ಯಾ ಗಿರೀಶ್ ಹಾಗೂ ಎಚ್.ಕೆ. ರಘು ಅವರು ಹಳೆಯ ಕನ್ನಡ ಚಲನಚಿತ್ರಗಳ ಹಾಡುಗಳನ್ನು ಹಾಡಿ ನೋಡುಗರನ್ನು ಸಂತೋಷಗೊಳಿಸಿದ್ದಾರೆ. ಇಂಥ ಹಲವು ಗಾಯಕರನ್ನು ಚಂದನ ವಾಹಿನಿ ಪರಿಚಯಿಸಲಿ. ಈ ಉತ್ತಮ ಕಾರ್ಯಕ್ರಮ ಇದೇ ರೀತಿ ಮುಂದುವರಿಯಲಿ.

—ಬಿ.ಎಸ್. ಮುಳ್ಳೂರ, ಹಲಗತ್ತಿ

## ಚುನಾವಣಾ ಸಮೀಕ್ಷೆಗಳೆಂಬ ಧಾರಾವಾಹಿಗಳು

ಕನ್ನಡ ಸುದ್ದಿವಾಹಿನಿಗಳಲ್ಲಿನ ಚುನಾವಣಾ ಸಮೀಕ್ಷೆಗಳು ಕುತೂಹಲ ಹುಟ್ಟಿಸುತ್ತವೆ. ಆದರೆ, ಸಮೀಕ್ಷೆಯ ವಿವರಗಳನ್ನು ಧಾರಾವಾಹಿಯಂತೆ ಎಳೆದೆಳೆದು ವೀಕ್ಷಕರ ತಾಳ್ಮೆಯನ್ನು ಪರೀಕ್ಷಿಸುತ್ತವೆ. ವೀಕ್ಷಕರಿಗೆ ಬೇಕಾಗಿರುವುದು ಜನರ ಒಲವು ನಿಲುವು. ಅದರ ಹೊರತಾಗಿ ನಿರೂಪಕರ, ಚರ್ಚಾಪಟುಗಳ ವಿಶ್ಲೇಷಣೆ ಮತ್ತು ಜಾತಿ ಲೆಕ್ಕಾಚಾರದ ಒಣಮಾತುಗಳಲ್ಲ. ಈ ಬಾರಿ ವಾಹಿನಿಯೊಂದು ತನ್ನ ಸಮೀಕ್ಷೆಯ ಫಲಿತಾಂಶವನ್ನು ಘೋಷಿಸಲು ಎರಡು ದಿನ ತೆಗೆದುಕೊಂಡಿದ್ದು ವೀಕ್ಷಕರ ಸಹನೆ ಪರೀಕ್ಷಿಸುವಂತಿತ್ತು. ಐದು ದಿನಗಳ ಕ್ರಿಕೆಟ್ ಪಂದ್ಯಗಳು ಈಗ ಕುತೂಹಲ ಕಳೆದುಕೊಂಡಿವೆ. ಇಂದು ಚುಟುಕು ಪಂದ್ಯಗಳ ಕಾಲ. ವಾಹಿನಿಗಳು ಹೇಳುವುದನ್ನು ಚುಟುಕಾಗಿ ಮತ್ತು ಸ್ಪಷ್ಟವಾಗಿ ಹೇಳಬೇಕು.

—ರಮಾನಂದ ಶರ್ಮಾ, ಬೆಂಗಳೂರು

## ನಿರೂಪಕಿಯ ಮಾತಿಗಿರಲಿ ಮಿತಿ

ವಾರಾಂತ್ಯದಲ್ಲಿ ಝೀ ಕನ್ನಡದಲ್ಲಿ ಪ್ರಸಾರವಾಗುವ 'ಸರಿಗಮಪ' ಸಂಗೀತ ಕಾರ್ಯಕ್ರಮ ಚೆನ್ನಾಗಿ ಮೂಡಿಬರುತ್ತಿದೆ. ಬಹುತೇಕ ಮಕ್ಕಳು ಚೆನ್ನಾಗಿ ಹಾಡುತ್ತಾರೆ. ಅವರ ಹಾಡುಗಳನ್ನು ಕೇಳುತ್ತಿದ್ದರೆ ಮನಸ್ಸಿಗೆ ಸಂತೋಷವಾಗುತ್ತದೆ. ಅನುಶ್ರೀ ಒಳ್ಳೆಯ ನಿರೂಪಕಿ. ಆದರೆ, ಸುಮ್ಮನೆ ಟೈಮ್ ವೇಸ್ಟ್ ಮಾಡುತ್ತಾರೆ ಎಂದು ಅನ್ನಿಸುತ್ತದೆ. ಸಂಗೀತ ನಿರ್ದೇಶಕ ಅರ್ಜುನ್ ಜನ್ಯ ಅವರ ಬಗ್ಗೆ ಸುಮ್ಮಸುಮ್ಮನೇ ಲೇವಡಿ ಮಾಡುವುದು ಅಷ್ಟು ಸಮಂಜಸವಾಗುವುದಿಲ್ಲ. ಆದಷ್ಟು ಅವರು ಕಡಿಮೆ ಸಮಯ ತೆಗೆದುಕೊಂಡರೆ ಒಳ್ಳೆಯದು.

—ಬಸಪ್ಪ ಹಲಗತ್ತಿ

## ರಣರಂಗ ಅಂದರೇನು?

ಚುನಾವಣೆ ಸಮಯದಲ್ಲಿ ನಮ್ಮ ಸುದ್ದಿ ಮಾಧ್ಯಮಗಳ 'ರಣ ಕಹಳೆ' ಶ್ರುತಿ ಕಳೆದುಕೊಂಡ ಕಹಳೆಯಂತಿದೆ. ಅವರು ಅದ್ಯಾವ ರಣರಂಗ ನೋಡಿದ್ದಾರೋ? ಅಬ್ಬಬ್ಬ ಅಂದರೆ ಸಿನಿಮಾಗಳಲ್ಲಿ ಮತ್ತು ರಾಮಾಯಣ–ಮಹಾಭಾರತ ಧಾರಾವಾಹಿಗಳಲ್ಲಿ. ಇವರು ಮಾಡುತ್ತಿರುವ ಕ್ಷೇತ್ರ ಪರ್ಯಟನೆ ನಗೆಪಾಟಲಿನಂತಿದೆ. ಪಕ್ಷಗಳ ಜೊತೆಗೆ ಇವರೂ ಜಾತಿವಾರು ಲೆಕ್ಕಾಚಾರ ಹೇಳ್ತಾರೆ. ಒಂದು ಜಾತಿಯ ಅಭ್ಯರ್ಥಿಗೆ ಆ ಜಾತಿಯ ಮತದಾರರೆಲ್ಲ ಸಾರಾಸಗಟಾಗಿ ಮತ ಹಾಕುತ್ತಾರೆ ಎನ್ನುವುದು ಸತ್ಯಕ್ಕೆ ದೂರ.

—ಕೆ.ಎಸ್. ಸೋಮೇಶ್ವರ, ಬೆಂಗಳೂರು